ಕ್ಷೇತ್ರ ಶಿಕ್ಷಣಾಧಿಕಾರಗಳ ಕಾರ್ಯಾಲಯ ಶಹರ ವಲಯ ಧಾರವಾಡ

# ಕನ್ನಡ ಭಾಷಾ ಬೋಧಕರ ಪರಿವಾರ, ಶಹರ ವಲಯ, ಧಾರವಾಡ

## ಎಸ್ ಎಸ್ ಎಲ್ ಸಿ ಮಾದರಿ ಪ್ರಶ್ನೆಪತ್ರಿಕೆ 2022 – 2023

**ವಿಷಯ :– ದ್ವಿತೀಯ ಭಾಷೆ ಕನ್ನಡ** **ವಿಷಯದ ಸಂಕೇತ : 33K**

**ಸಮಯ :– 3 ಗಂಟೆಗಳು** **ಗರಿಷ್ಠ ಅಂಕಗಳು : 80**

---

**I) ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಉತ್ತರ ಬರೆಯಿರಿ. 4X1=4**

1) 'ತಾನು ತಾವು' ಇವು ಈ ಸರ್ವನಾಮಗಳಿಗೆ ಸಂಬಂಧಿಸಿದೆ
ಎ) ಅನ್ವರ್ಥಕ ಬಿ) ಅಂಕಿತನಾಮ ಸಿ) ಆತ್ಮಾರ್ಥಕ ಡಿ) ರೂಡನಾಮ.

2) 'ಮರವನ್ನು' ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ್ಯವನ್ನು ಗುರುತಿಸಿ
ಎ) ತೃತೀಯಾ ಬಿ) ಚತುರ್ಥಿ ಸಿ) ದ್ವಿತೀಯಾ ಡಿ) ಪಂಚಮಿ

3) 'ಮೈಕೊಡವಿ' ಈ ಪದವು ಯಾವ ಸಮಾಸಕ್ಕೆ ಉದಾಹರಣೆಯಾಗಿದೆ ?
ಎ) ಕರ್ಮದಾರೆ ಬಿ) ಕ್ರಿಯಾಸಮಾಸ ಸಿ) ಗಮಕಸಮಾಸ ಡಿ) ತತ್ಪುರುಷಸಮಾಸ

4) ' ಮಾಡಿದರು ' ಪದದ ದಾತು ಪದವನ್ನು ಗುರುತಿಸಿ.
ಎ) ಮಾಟ ಬಿ) ಮಾಡು ಸಿ) ಮಾಡಿದ ಡಿ) ಮಾಡಿ

**II) ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ 12X1=12**

5) ಗಿಳಿಯನ್ನು ಕಂಡು ಇಂದ್ರನಿಗೆ ಆಶ್ಚರ್ಯವಾದದ್ದು ಏಕೆ ?
6) ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದಾರೆ ?
7) ಅಮೇರಿಕಾದಲ್ಲಿ ಗ್ಯಾನೆಟ್ ಕಡಲಹಕ್ಕಿ ಗೂಡನ್ನು ಯಾವ ವಸ್ತುಗಳಿಂದ ಅಲಂಕರಿಸಿತ್ತು ?
8) ಹೆಡ್ ಮಾಸ್ತರರು ಸಂತೋಷಗೊಂಡದು ಏಕೆ ?
9) ಲಂಡನ್‌ನಲ್ಲಿರುವ ಪ್ರಸಿದ್ಧ ವಿಶ್ವವಿದ್ಯಾಲಯಗಳು ಯಾವುವು ?
10) ಗೋಪಾಲನು ಶಾಲೆಯಿಂದ ಮನೆಗೆ ಬರುವಾಗ ಏಕೆ ಭಯಪಡುತ್ತಿದ್ದನು ?
11) ಏಣಿಯನ್ನು ಬಳಸಿ ಮೇಲೇರಿದವರಿಗೆ ಏಣಿ ಹಾಕುವ ಸವಾಲು ಏನು ?
12) ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಹೇಗೆ ಸಿಂಗಾರಗೊಳ್ಳುತ್ತಾಳೆ ?

13) ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕಂದು ಕವಿ ಹೇಳಿದ್ದಾರೆ?
14) ನಮ್ಮ ದುಡಿಮೆಯ ಹೂವು ಫಲಿಸುವುದು ಯಾವಾಗ ?
15) ಕುಣಿಗಲ್ ಕೆರೆಯ ಅಂದವನ್ನು ನೋಡಲು ಯಾರು ಬಂದರೆಂದು ಉತ್ಪ್ರೇಕ್ಷಿಸಲಾಗಿದೆ?
16) ಅಕ್ಕಮಹಾದೇವಿಯ ವಚನಗಳ ಅಂಕಿತ ಹೆಸರಿಸಿ.

**III) ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ 8X2=16**

17) ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಎನು ?
18) ನಮ್ಮ ದೇಶದ ರಕ್ಷಣಾಪಡೆ ಏಕೆ ಪ್ರಬಲವಾಗಿರಬೇಕು ?
19) ಹಕ್ಕಿಗಳು ಗೂಡುಗಳನ್ನು ಯಾವ ರೀತಿಯಲ್ಲಿ ಅಲಂಕರಿಸುತ್ತವೆ ?
20) ಹೆಡ್ ಮಾಸ್ತರರು ಅಡುಗೆ ಮನೆಗೆ ಹೋಗಿ ಎಷ್ಟು ಕಪ್ಪುಗಳನ್ನು ತಂದರು ಹಾಗೂ ಮನೆಗೆ ಬಂದ ಮಕ್ಕಳೆಷ್ಟು ?
21) ಲಂಡನ್‌ನಲ್ಲಿ ಸಂಭವಿಸಿದ ದುರಂತಗಳ ಬಗ್ಗೆ ಗೈಡ ತಿಳಿಸಿದ ವಿಚಾರಗಳೇನು ?
22) ಮಲಗಿದ್ದ ಗೋಪಾಲನನ್ನು ತಾಯಿಯು ಯಾವ ಮಾತಿನಿಂದ ಏಳಿಸಿದಳು ?
23) ಚೈತ್ರದಲ್ಲಿ ನೆಲ ಮುಗಿಲ ಮಾಲಗ ನಡೆದಂತೆ ಭಾಸವಾಗತ್ತದೆ ಏಕೆ ?
24) ಯುದ್ದವನ್ನು ಮಾಡದೆಯೇ ಸುಖಪಡಬಹುದೆಂಬುದನ್ನು ಉತ್ತರನು ಹೇಗೆ ಸಮರ್ಥಿಸಿದನು ?

**IV) ಈ ಕೆಳಗಿನ ಕವಿ/ಸಾಹಿತಿಗಳ ಸ್ಥಳ. ಕಾಲ. ಕೃತಿ ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 1X3=3**

25) ರಮೇಶಗೌಡ ಮಲ್ಲನಗೌಡ ಕಲ್ಲನಗೌಡ

**V) ಈ ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯ ರೂಪದಲ್ಲಿ ಬರೆಯಿರಿ 1X3=3**

26) "ಮೇಲಂತಸ್ತು ಶಾಶ್ವತವಲ್ಲ ಸುರಕ್ಷಿತವೂ ಅಲ್ಲ
ನಾನು ಬುನಾದಿಯನ್ನೇ ಕೆಡವುತ್ತೇನೆಂದರೆ
ಏನು ಮಾಡುತ್ತಾರೆ ಈ ತ್ರಿಶಂಕುಗಳು"

**VI) ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣ ಬರೆದು ಸಮನ್ವಯಗೊಳಿಸಿರಿ 1X3=3**

27) ನಾಡ ನರಿ

**VII) ಈ ಕೆಳಗಿನ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ 1X3=3**

28) ಒಕ್ಕಲಿಗ ಒಕ್ಕದಿರೆ ಜಗವೆಲ್ಲ ಬಿಕ್ಕುವುದು.
ಅಥವಾ
ಹಾಸಿಗೆ ಇದ್ದಷ್ಟು ಕಾಲು ಚಾಚು.

**VIII) ಈ ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ 5X3=15**

29) ಇವರೆಲ್ಲ ಬಸ್ಸೋ, ರೈಲೋ ಹಿಡಿಯಲು ತರಾತುರಿಯಿಂದ ಹೊರಟಿದ್ದರು?

30) ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು.

31) ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಹೇಳುವ ಶಾಲೆ ಅದು.

32) ಸಿಡುಕು ಮಿಡುಕನು ತೊರೆದು ಮೌನಿಯಾಗು.

33) ನಾಡ ನರಿಯವೊಲು ಹಲುಗಿರಿಯೆ ಬಿಡುವೆನೆ.

**IX) ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ 1X4=4**

34) ಏಕಾಂಗಿ ವೀರನಂತೆ – – – – – – – – – –

– – – – – – – – – – – – – – – –

– – – – – – – – – – – – – –– – –

– –– – – – – – – – – – – –ನಡೆದನು.

ಅಥವಾ

ಕಾಡು ಕಾಡು – – – – – – – – – – –

– – – – – – – – – – – – – – – –

– – – – – – – – – – – – – – –

– – – – – – – – – – – – ಕಂಡಿತು.

**X) ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ 1X4=4**

35) ಗುರಿ ಪದ್ಯದ ಸಾರಾಂಶವನ್ನು ಬರೆಯಿರಿ.

ಅಥವಾ

ನರನ ಜೀವನದ ಗುರಿ ಯಾವುದಾಗಿರಬೇಕೆಂದು ಅಡಿಗರು ಆಶಿಸಿದ್ದಾರೆ.

**XI) ಈ ಕೆಳಗಿನ ಗದ್ಯಭಾಗವನ್ನು ಮನಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**2+2=4**

ವಾಜಶ್ರವಸ ಎಂಬ ಋಷಿಯ ಮಗ ನಚಿಕೇತ , ವಾಜಶ್ರವಸನು ವಿಶ್ವಜಿತ್ ಎಂಬ ಯಾಗದ ಸಿದ್ಧತೆಯಲ್ಲಿದ್ದ. ಅಲ್ಲಿಗೆ ಬಂದ ನಚಿಕೇತನು ಉಪಯೋಗವಿಲ್ಲದ ಹಸುಗಳನ್ನು ತಂದೆ ದಾನ ಮಾಡುತ್ತಿದ್ದುದನ್ನು ಗಮನಿಸಿದ ತನಗೆ ಪ್ರಿಯವಾದುದನ್ನೇ ದಾನ ಮಾಡುವುದು ಶ್ರೇಷ್ಠದಾನ ಎಂದು ತಾಯಿಯಿಂದ ಕೇಳಿದವನಿಗೆ ತಂದೆಯ ಕಾಯಕ ಸಮಾಧಾನ ತರಲಿಲ್ಲ. ತಂದೆಗೆ ಅತಿ ಪ್ರಿಯನಾದ ನಾನೇ ದಾನ ಮಾಡಲ್ಪಟ್ಟರೆ ತಂದೆಗೆ ಶ್ರೇಯಸ್ಕರವರವೆಂದು ತಿಳಿದ. ತಂದೆಯಲ್ಲಿಗೆ ಬಂದು ಪದೇ ಪದೇ "ನನ್ನನ್ನು ಯಾರಿಗೆ ದಾನ ಮಾಡುತ್ತೀರಿ" ಎಂದು ಪ್ರಶ್ನಿಸತೊಡಗಿದ.

ಮುಂಗೋಪಿಯಾಗಿದ್ದ ವಾಜಶ್ರವಸ ಋಷಿಯು "ನಿನ್ನನ್ನು ಮೃತ್ಯುವಿಗೆ ದಾನ ಮಾಡಿದ್ದೇನೆ" ಎಂದು ಬಿಟ್ಟ ತಂದೆಯ ಮಾತು ಪೂರೈಸಲು ನಚಿಕೇತ ಯಮಲೋಕಕ್ಕೆ ಹೋದ ಅಲ್ಲಿ ಯಮನಿಲ್ಲದ ಕಾರಣ ಮೂರು ದಿನ ಕಾದು ಕುಳಿತ.

ನಂತರ ಬಂದ ಯಮನು ನಚಿಕೇತನ ಧೈರ್ಯ , ಸಾಧನೆಗಳಿಂದ ಹರ್ಷಿತನಾಗಿ ಮೂರು ವರ ಕೇಳುವಂತೆ ಹೇಳಿದ. ನಚಿಕೇತನು ಒಂದನೇವರದಲ್ಲಿ ತನ್ನ ತಂದೆಗೆ ಸಂತೃಪ್ತಿ ಸಿಗಲೆಂದು ಕೇಳಿದ ಯಮ "ತಥಾಸ್ತು" ಎಂದ: ಎರಡನೇ ವರದಲ್ಲಿ ಅಗ್ನಿವಿದ್ಯೆಯನ್ನು ದಯಪಾಲಿಸಬೇಕೆಂದು ಕೇಳಿಕೊಂಡ. ದೈವತ್ವ ಸಿಗುವ ಆ ವಿದ್ಯೆಯನ್ನು ಯಮ ದಯಪಾಲಿಸಿ ಅದು "ನಚಿಕೇತಾಗಿ ಎಂದು ಪ್ರಸಿದ್ದವಾಗಲಿ" ಎಂದು ಹರಸಿದ. ಮೂರನೆಯ ವರದಲ್ಲಿ ನಚಿಕೇತ ಜನ್ಮಾಂತರಗಳ ರಹಸ್ಯ ಅಡಗಿರುವ ಆತ್ಮ ವಿದ್ಯೆಯನ್ನು ಕೇಳಿದ ನಚಿಕೇತ ಜ್ಞಾನವಿದ್ಯೆಯನ್ನು ತಂದ ಮಹಾನುಭಾವ.

**ಪ್ರಶ್ನೆಗಳಗೆ ಉತ್ತರಿಸಿರಿ**

36) ಅ) ನಚಿಕೇತ ಯಾರ ಮಗ ? ತಂದೆಯಲ್ಲಿ ಕೇಳಿದ ಪ್ರಶ್ನೆ ಏನು ?
ಆ) ನಚಿಕೇತ ಯಮನಿಂದ ಪಡೆದ ವರಗಳಾವವು ?

**XII) ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ 1X4=4**

37) "ಪ್ರವಾಹದಿಂದಾಗುವ ಅನಾಹುತಗಳು"

ಅಥವಾ

"ರಾಷ್ಟ್ರೀಯ ಹಬ್ಬಗಳ ಪ್ರಾಮುಖ್ಯತೆ"

**XIII) ಈ ಕೆಳಗೆ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ**

**1X5=5**

38) ನಿಮ್ಮನ್ನು ಕಾರವಾರ ಜಿಲ್ಲೆಯ ಯಲ್ಲಾಪುರ ತಾಲೂಕಿನ ಕಿರವತ್ತಿ ಗ್ರಾಮದ ನಿವಾಸಿ ಶ್ರುತಿ/ಸಂದೇಶ ಎಂದು ಭಾವಿಸಿ ನಿಮ್ಮ ಊರಿನ ಕುಡಿಯುವ ನೀರಿನ ಸಮಸ್ಯೆ ಕುರಿತು ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಪತ್ರ ಬರೆಯಿರಿ.

ಅಥವಾ

ನಿಮ್ಮನು ಸರಕಾರಿ ಪ್ರೌಢಶಾಲೆ ಕೊನನಹಳ್ಳಿಯ ವಿದ್ಯಾರ್ಥಿ ಸುರೇಶ /ಭಾವನಾ ಎಂದು ಭಾವಿಸಿಕೊಂಡು ನಿಮ್ಮಶಾಲೆಯ ವಾರ್ಷಿಕ ಕ್ರೀಡಾಕೂಟವನ್ನು ನೊಡಲು ಬರುವಂತೆ ಕೋಲಾರದಲ್ಲಿರುವ ನಿಮ್ಮ ತಂದೆಗೆ ಪತ್ರವೂಂದನ್ನು ಬರೆಯಿರಿ.